**ದಿನಾಂಕಃ 07.06.2023**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪ್ರಾ.ಸಾಃ 1**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಡಿ.ಎಸ್.ಎಸ್, ವಕೀಲರಿಂದಃ</u>**

**2.** **1** ಮತ್ತು **2** ನೇ ಪ್ರತಿವಾದಿ ನನ್ನ ತಾಯಿ ಮತ್ತು ತಂಗಿ ಅಂದರೆ ಸರಿ. ನನ್ನ ತಂದೆಯ ಓದೇಗೌಡ ಅಂದರೆ ಸರಿ. ಓದೇಗೌಡರವರ ತಂದೆಯ ಹೆಸರು ದೊಡ್ಡಪುಟ್ಟೇಗೌಡ ಅಂದರೆ ಸರಿ. ನನ್ನ ತಾತಾ - ದೊಡ್ಡಪುಟ್ಟೇಗೌಡರವರಿಗೆ ಮೂರು ಜನ ಗಂಡು ಮಕ್ಕಳು. ಅವರೆಂದರೆ, ನಿಂಗೇಗೌಡ, ಕರೀಗೌಡ ಮತ್ತು ಓದೇಗೌಡ.

**3.** ನನ್ನ ತಾತನಿಗೆ ಎಷ್ಟು ಜಮೀನು ಇತ್ತು ಎಂದು ನನಗೆ ಗೊತಿತಲ್ಲ. ಆದರೆ ನನ್ನ ತಾತ ನನ್ನ ತಂದೆ **2.09** ಗುಂಟೆ ಜಮೀನು ಬರೆದುಕೊಟ್ಟಿದ್ದಾರೆ. ಯಾವ ರೂಪವಾಗಿ ಬರೆದುಕೊಟ್ಟರು ಅಂದರೆ ಸಾಕ್ಷಿ ಮೌಖಿಕವಾಗಿ ಹೇಳಿದರು.

**4.** ದಾವ ಷಡ್ಯೂಲ್ ಸ್ವತ್ತು ಹೊರತುಪಡಿಸಿ ನನ್ನ ತಾತ ಒಂದು ಮನೆಯನ್ನು ನನ್ನ ತಂದೆಗೆ ಬರೆದುಕೊಟ್ಟಿದ್ದಾರೆ. ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪರಿಗೆ ಯಾವ ರೀತಿ ಜಮೀನುಗಳನ್ನು ಪಡೆದುಕೊಂಡರು ಎಂಬುದು ನನಗೆ ಗೊತ್ತಿಲ್ಲ.

**5.** ಸರ್ವೆ ನಂ.**83/1** ರ **1** ಎಕರೆ **2** ಗುಂಟೆ ಯಾರಿಗೆ ಸೇರಿದ್ದು ಅಂದರೆ ನನ್ನ ದೊಡ್ಡಪ್ಪರಾದ - ಕರೀಗೌಡರವರಿಗೆ ಸೇರಿದ್ದು. ಸರ್ವೆ ನಂ.**31** ರಲ್ಲಿ **4** ಎಕೆರೆ **19** ಗುಂಟೆ ನಿಮ್ಮ ತಂದೆಯ ಹೆಸರಿನಲ್ಲಿದೆ ಅಂದರೆ ಮೊದಲಿನಿಂದಲೂ ಪಹಣಿಯಲ್ಲಿ ಅದೇ ರೀತಿ ಬರುತ್ತಿದ್ದು, ಈಗ ನಾವು ಪಹಣಿಯಲ್ಲಿ **2** ಎಕರೆ **09** ಗುಂಟೆ ಎಂದು ಖಾತೆ ಮಾಡಿಸಿಕೊಂಡಿದ್ದೇವೆ.

**6.** ಬೆಳಕೆರೆ ಗ್ರಾಮ ಸರ್ವೆ ನಂ.**62/2** ರಲ್ಲಿ **10** ಗುಂಟೆ ನಿಮ್ಮ ತಂದೆಯ ಹೆಸರಿನಲ್ಲಿದೆ ಅಂದರೆ ಸರಿಯಲ್ಲ. ಕಾಡಪೊತ್ತಿನ ಗ್ರಾಮದ ಸರ್ವೆ ನಂ.**83/5** ರಲ್ಲಿ **35** ಗುಂಟೆ, **85/8** ರಲ್ಲಿ **8** ಗುಂಟೆ ನಿಮ್ಮ ತಂದೆಯ ಹೆಸರಿನಲ್ಲಿದೆ ಅಂದರೆ ಸರಿಯಲ್ಲ. ಸದರಿ ಸರ್ವೆ ನಂಬರಗಳನ್ನು ಈ ದಾವಾಗೆ ಸೇರಿಸಲು ನಿಮಗೆ ತೊಂದರೆ ಇದೆಯೇ ಅಂದರೆ ದಾವಾ ಷಡ್ಯೂಲ್ ಹೊರತುಪಡಿಸಿ, ನನ್ನ ತಂದೆಗೆ ಬೇರೆ ಯಾವುದೇ ಜಮೀನು ಇಲ್ಲ.

**7.** **2010** ರವರೆಗೆ ನಿಮಗೆ ಓದಲು, ಬರೆಯಲು ಬರುತ್ತಿತ್ತು ಅಂದರೆ ಇಲ್ಲ. ಆನಂತರ ಪ್ರಸ್ತುತ ದಾವೆ ಸಲ್ಲಿಸಿದ ನಂತರ ನನಗೆ ಓದಲು, ಬರೆಯಲು ಬರುವುದಿಲ್ಲ ಎಂದು ಉದ್ದೇಶಪೂರ್ವಕವಾಗಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**8.** ಮುಕಡಿಗೌಡ ಬಿನ್ ಚಿಕ್ಕೇಗೌಡ ನಿಮಗೆ ಗೊತ್ತಾ ಅಂದರೆ ಗೊತ್ತಿಲ್ಲ. ನಾಗೇಶ ಬಿನ್ ಓದೇಗೌಡ ಅಂದರೆ ನಾನೇ. ನಿಪಿ.**3** - ದಾನಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇವೆ ಅಂದರೆ ಸರಿಯಲ್ಲ.

**9.** ನಾನು ಚಿಕ್ಕದಿನಿಂದಲೂ ವ್ಯವಸಾಯಗಾರ. ನಿಪಿ.**3** ಆದ ನಂತರವೂ ನಾನು ಮತ್ತು ಪ್ರತಿವಾದಿ ಅನೋನ್ಯವಾಗಿದ್ದೆವು ಅಂದರೆ ಸರಿ. ದಾವಾ ಷಡ್ಯೂಲ್ ಸ್ವತ್ತನ್ನು ಹೊರತುಪಡಿಸಿ ಉಳಿದಂತೆ ಜಮೀನುಗಳನ್ನು ನಾನೇ ಮಾರಾಟ ಮಾಡಿದ್ದೇನೆ ಅಂದರೆ ಸರಿಯಲ್ಲ.

**10.** ನಿಮ್ಮ ಭಾಗಕ್ಕೆ ಬಂದಂತಹ ಜಮೀನುಗಳನ್ನು ಮಾರಾಟ ಮಾಡಲು ಪ್ರತಿವಾದಿಗಳು ತಡೆಯಲು ಮುಂದಾದಾಗ ಅವರು ವಿರುದ್ಧ ಪ್ರಸ್ತುತ ದಾವ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ಎನ್.ಉಷಾರಾಣಿ )
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,**
**ಚನ್ನಪಟ್ಟಣ.**